ಕೃಷ್ಣಾ ಮೇಲ್ದಂಡೆ ಯೋಜನೆಯ ಡಿಸ್ಟ್ರಿಬ್ಯೂಟರಿಯಲ್ಲಿ ನೀರು ಮುಂದೆ ಹೋಗುವ ಬದಲು ಹಿಂದೆ ಹೋಗುತ್ತಿರುವ ಬಗ್ಗೆ

೩೬೩. (೪೭೦) ಶ್ರೀ ಶಿವಶೇಖರಪ್ಪ ಗೌಡ ಶಿರವಾಳ (ಶಹಾಪುರ).—ಮಾನ್ಯ ವಿಮುಖ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯೆಯಿಟ್ಟು ಉತ್ತರಿಸುವರೇ:—

ಅ) ಕೃಷ್ಣ ಮೇಲ್ದಂಡೆ ಯೋಜನೆಯ ಎಸ್.ಬಿ.ಸಿ ಳಿನೇ ಡಿಸ್ಟ್ರಿಬ್ಯೂಟರಿಯಲ್ಲಿ ಲ್ಯಾಟರಲ್ ನಿರ್ಮಾಣಕ್ಕೆ ವೆಚ್ಚವಾದ ಹಣವೆಷ್ಟು ?

ಆ) ಸದರಿ ಕಾಲುವೆಯಲ್ಲಿ ನೀರು ಮುಂದೆ ಹೋಗುವ ಬದಲು ಹಿಂದಕ್ಕೆ ಹೋಗುತ್ತಿರುವುದು ನಿಜವಲ್ಲವೆ ?

ಇ) ಹಾಗಿದ್ದಲ್ಲಿ, ನಿರ್ಮಾಣ ಮಾಡಿದ ಅಧಿಕಾರಿಗಳ ಮೇಲೆ ಕ್ರಮವನ್ನೇನಾದರೂ ಕೈಗೊಳ್ಳಲಾಗಿದೆಯೆ ?

ಈ) ಮೇಲ್ಕಂಡ ಡಿಸ್ಟ್ರಿಬ್ಯೂಟರಿಯಲ್ಲಿ ರಿಪೇರಿಗೆಂದು ಸೂಮಾರು ೮೦ ಲಕ್ಷ ರೂಪಾಯಿಗಳನ್ನು ವೆಚ್ಚ ಮಾಡಿರುವುದು ನಿಜವಲ್ಲವೆ ?

ಉ) ಹಾಗಿದ್ದಲ್ಲಿ, ಯಾವ ಬಾಬಿಗಾಗಿ ವೆಚ್ಚ ಮಾಡಲಾಗಿದೆ ? (ವಿವರವನ್ನೊದಗಿಸಬೇಕಾಗಿ ವಿನಂತಿ)

ಮುಖ್ಯ ಮಂತ್ರಿಗಳು (ಶ್ರೀ ಎಸ್. ಆರ್. ಬೊಮ್ಮಾಯಿ). —

ಅ) ಶಹಾಪುರ ಉಪ ಕಾಲುವೆಯ ವಿತರಣಾ ನಾಲೆ ಸಂಖ್ಯೆ ೪ ರಿಂದ ಹೊರಡುವ ೬ ಪಾರ್ಶ್ವ ಕಾಲುವೆಗಳ ನಿರ್ಮಾಣಕ್ಕೆ ೧೭,೩೩,೦೧೪ ರೂ. ಗಳು ವೆಚ್ಚವಾಗಿರುತ್ತದೆ,

ಆ) ಶಹಾಪುರ ಉಪ ಕಾಲುವೆಯು ಕಿ.ಮೀ. ೩ ಮತ್ತು ಪಾರ್ಶ್ವ ಕಾಲುವೆ ಸಂಖ್ಯೆ ೧ ಮತ್ತು ೨ರ ತಳಮಟ್ಟದಲ್ಲಿ ಅಲ್ಲಲ್ಲಿ ಸ್ವಲ್ಪ ಏರುಪೇರುಗಳಿದ್ದುದರಿಂದ ನೀರು ನಿಲ್ಲುತ್ತಿತ್ತು.

ಇ) ಸಂಬಂಧಪಟ್ಟ ಅಧಿಕಾರಿಗಳ ಮೇಲೆ ಜವಾಬ್ದಾರಿಯನ್ನು ನಿಗದಿ ಪಡಿಸುವ ಬಗ್ಗೆ ವಿಷಯವು ತನಿಖೆಯಲ್ಲಿದೆ.

ಈ) ತಳಮಟ್ಟದ ಏರುಪೇರುಗಳನ್ನು ಸಂಬಂಧಪಟ್ಟ ಗುತ್ತಿಗೆದಾರರು ತಮ್ಮ ಸ್ವಂತ ಖರ್ಚಿನಲ್ಲಿ ದುರಸ್ತಿ ಮಾಡಿದ್ದಾರೆ. ಏರಿಗಳನ್ನು ಎತ್ತರಿಸುವ ಕಾಮಗಾರಿಗಾಗಿ ೫೨,೫೫೪ ರೂಪಾಯಿಗಳು ವೆಚ್ಚವಾಗಿರುತ್ತದೆ.

ಉ) ಏರಿಗಳನ್ನು ಎತ್ತರಿಸುವ ಕಾಮಗಾರಿಗಳ ವಿವರ ಹೀಗಿದೆ:—

೧)	ವಿತರಣಾ ಕಾಲುವೆಯ ಕಿ.ಮೀ. ೩ರ ಏರಿಯನ್ನು ಎತ್ತರಿಸುವುದಕ್ಕಾಗಿ...	ರೂ. ೨೦,೭೩೧–೦೦
೨)	ಪಾರ್ಶ್ವ ಕಾಲುವೆ ಸಂಖ್ಯೆ ೨ರ ಏರಿಯನ್ನು ಎತ್ತರಿಸುವುದಕ್ಕಾಗಿ...	ರೂ. ೩೧,೮೨೩–೦೦
	ಒಟ್ಟು	ರೂ. ೫೨,೫೫೪–೦೦

ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಕಾಪು ಕ್ಷೇತ್ರದ ಪೋಲೀಸ್ ಠಾಣೆ ಬಗ್ಗೆ

೩೬೪. (೩೨೯) ಶ್ರೀ ವಸಂತ ವಿ. ಸಾಲ್ಯಾನ್ (ಕಾಪು).—ಮಾನ್ಯ ಮುಖ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯೆಯಿಟ್ಟು ಉತ್ತರಿಸುವರೇ:—

ಅ) ಕಾಪು ಕ್ಷೇತ್ರದ ಪೋಲೀಸ್ ಠಾಣೆಯನ್ನು ಪೂರ್ಣ ಪ್ರಮಾಣದ ಠಾಣೆಯನ್ನಾಗಿ ಮಾಡುವುದಕ್ಕೆ ಸರ್ಕಾರವು ಯೋಜನೆ ಹಾಕಿದೆಯೇ ?

ಆ) ಕಾಪು ಕ್ಷೇತ್ರದ ಪೋಲೀಸ್ ಸಿಬ್ಬಂದಿಗಳಿಗೆ ವಸತಿ ಸೌಲಭ್ಯಕ್ಕೆ ಜಾಗ ಮಂಜೂರಾತಿಯಾಗಿ ಎಷ್ಟು ವರ್ಷಗಳಾಯಿತು ?

ಇ) ಈ ವಸತಿ ಗೃಹಗಳನ್ನು ಯಾವಾಗ ಪ್ರಾರಂಭಿಸಲಾಗುವುದು.

ಶ್ರೀ ಎಸ್.ಆರ್. ಬೊಮ್ಮಾಯಿ (ಮುಖ್ಯ ಮಂತ್ರಿಗಳು).—

ಆ) ಹಾಕಿದೆ.

ಆ) ಕಾಪು ಕ್ಷೇತ್ರದ ಪೋಲೀಸ್ ಸಿಬ್ಬಂದಿಯ ವಸತಿ ಗೃಹಗಳ ನಿರ್ಮಾಣಕ್ಕಾಗಿ ಪಡು ಗ್ರಾಮದ ಜಾಗವು ೧೯೫೬ ರಿಂದ ಪೋಲೀಸ್ ಇಲಾಖೆಯ ವಶದಲ್ಲಿದೆ.

ಇ) ಕರ್ನಾಟಕ ರಾಜ್ಯ ಪೋಲೀಸ್ ಗೃಹ ನಿರ್ಮಾಣ ನಿಗಮವು ರಾಜ್ಯದಾದ್ಯಂತ ಪೋಲೀಸ್ ವಸತಿ ಗೃಹಗಳನ್ನು ಹಂತ ಹಂತವಾಗಿ ನಿರ್ಮಿಸುವ ಯೋಜನೆಯನ್ನು ಹೊಂದಿದ್ದು ಈ ನಿಗಮವು ಕಾಪು ಕ್ಷೇತ್ರದ ಪೋಲೀಸ್ ಸಿಬ್ಬಂದಿಗಳಿಗೂ ಸಹ ವಸತಿ ಸೌಕರ್ಯವನ್ನು ತನ್ನ ಹಂತ ಹಂತಗಳ ಯೋಜನೆಯಡಿಯಲ್ಲಿ ಆದ್ಯತೆ, ಅಗತ್ಯತೆ ಮತ್ತು ಆರ್ಥಿಕ ಅನುದಾನವನ್ನು ಅನುಸರಿಸಿ ಕೈಗೆತ್ತಿಕೊಳ್ಳುವುದು.

ರಾಜ್ಯದಲ್ಲಿ ನಡೆದ ವರದಕ್ಷಿಣೆ ಸಾವುಗಳ ಕುರಿತು

೩೬೬. (೩೦೫) ಶ್ರೀ ಆರ್. ವೆಂಕಟರಾಮಯ್ಯ (ಮುಳಬಾಗಿಲು).—ಮಾನ್ಯ ಮುಖ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ:—

ಆ) ೧೯೮೮–೮೯ರ ಸಾಲಿನಲ್ಲಿ ಕರ್ನಾಟಕ ರಾಜ್ಯದ ಕೋಲಾರ ಜಿಲ್ಲೆಯ ಬಟ್ಲಹಳ್ಳಿ, ತಿಪಟೂರ ಬೆಂಗಳೂರು ಹಾಗೂ ಮತ್ತಿತರ ಪ್ರದೇಶಗಳಲ್ಲಿ ನಡೆದ ವರದಕ್ಷಿಣೆ ಕಿರುಕುಳ, ಬೆಂಕಿ ಹಚ್ಚಿದ ಮತ್ತು ಅಮಾನುಷ ಕೃತ್ಯಗಳಿಂದ ಸಾವಿಗೀಡಾದವರ ಸಂಖ್ಯೆ ಎಷ್ಟು

ಆ) ಹಾಗಿದ್ದಲ್ಲಿ ಸರ್ಕಾರವು ವರದಕ್ಷಿಣೆ ಸಾವುಗಳನ್ನು ತಡೆಗಟ್ಟಲು ಕೈಗೊಂಡಿರುವ ಕ್ರಮಗಳಾವುವು ?

ಶ್ರೀ ಎಸ್.ಆರ್. ಬೊಮ್ಮಾಯಿ (ಮುಖ್ಯ ಮಂತ್ರಿಗಳು).—

ಆ) ೧೯೮೮ ಮತ್ತು ೧೯೮೯ನೇ ವರ್ಷದ ಫೆಬ್ರುವರಿ ೨೮ರ ವರೆಗೆ ಕರ್ನಾಟಕ ರಾಜ್ಯದಲ್ಲಿ ವರದಿಯಾದ ವರದಕ್ಷಿಣೆ ಕಿರುಕುಳ ಇತ್ಯಾದಿಗಳಿಂದ ಸಾವಿಗೀಡಾದ ಮಹಿಳೆಯರ ಸಂಖ್ಯೆಯನ್ನು ಕೆಳಗೆ ಕೊಡಲಾಗಿದೆ.

೧೯೮೮	೧೮೨
೧೯೮೯	೩೦
(ಫೆಬ್ರುವರಿ ೨೮ರ ವರೆಗೆ)	

ಇದೇ ಅವಧಿಯಲ್ಲಿ ಕೋಲಾರ ಜಿಲ್ಲೆಯ ಬಟ್ಲ ಹಳ್ಳಿಯಲ್ಲಿ ಒಂದು ಪ್ರಕರಣವು ೧೯೮೯ ಫೆಬ್ರುವರಿ ತಿಂಗಳಲ್ಲಿ ವರದಿಯಾಗಿದೆ. ಬೆಂಗಳೂರು ನಗರದಲ್ಲಿ ೧೯೮೮ರಲ್ಲಿ ೩೧ ಪ್ರಕರಣಗಳು, ೧೯೮೯ರ ಫೆಬ್ರುವರಿ ೨೮ರ ವರೆಗೆ ೭ ಪ್ರಕರಣಗಳು ವರದಿಯಾಗಿವೆ. ಈ ಅವಧಿಯಲ್ಲಿ ತಿಪಟೂರಿನಲ್ಲಿ ವರದಕ್ಷಿಣೆ ಸಾವಿನ ಪ್ರಕರಣಗಳು ವರದಿಯಾಗಿರುವುದಿಲ್ಲ.

ಆ) ವರದಕ್ಷಿಣೆ ಸಾವಿನ ಪ್ರಕರಣಗಳನ್ನು ತಡೆಗಟ್ಟಲು ಹಲವಾರು ಕ್ರಮಗಳನ್ನು ತೆಗೆದುಕೊಳ್ಳಲಾಗಿದೆ.

೧) ೧೯೮೮ರ ವರದಕ್ಷಿಣೆ ನಿರೋಧ ಕಾಯಿದೆಯನ್ನು ೧೯೮೫ ಮತ್ತು ೧೯೮೮ರಲ್ಲಿ ತಿದ್ದುಪಡಿ ಮತ್ತು ಈ ಪ್ರಕರಣಗಳ ಅಪರಾಧಿಗಳಿಗೆ ನೀಡುವ ಶಿಕ್ಷೆಯನ್ನು ಹೆಚ್ಚಿಸಲಾಗಿದೆ ಮತ್ತು ಅಪರಾಧಿಗಳನ್ನು ಸುಲಭವಾಗಿ ಅಭಿಯೋಗಗೊಳಿಸುವಂತೆ ಕಾನೂನಿಗೆ ತಿದ್ದುಪಡಿ ಮಾಡಲಾಗಿದೆ,